ಎನ್ನುವುದರ ಬಗ್ಗೆ ಎಲ್ಲಾ ಸೇರಿ ತೀರ್ಮಾನ ಮಾಡೋಣ. ಅಧ್ಯಕ್ಷರೂ ಇರುತ್ತಾರೆ ಎಲ್ಲಾ ಕುಳಿತುಕೊಂಡು ಚರ್ಚೆ ಮಾಡೋಣ. ಆದರೆ I would appeal Mr. Nagaraj not to be uncharitable in making remarks. ಸರ್ಕಾರ ಇದೆಯೋ ಇಲ್ಲವೋ ಎನ್ನುವ ಮಾತು.

ಶ್ರೀ ವಾಟಾಳ್ ನಾಗರಾಜ್ :– ನನಗೆ ನಿನ್ನೆ ಮೊನ್ನೆಯಿಂದ ನಿಮ್ಮ ಸರಕಾರ ಇಲ್ಲ ಎಂದು ಅನ್ನಿಸುತ್ತಾ ಇತ್ತು. ಅದಕ್ಕೋಸ್ಕರವಾಗಿ ನಾನು ಹೇಳಿದೆ .....

(ನಗು)

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಉಪಾಧ್ಯಕ್ಷಿಣಿಯವರೇ, ಒಂದು ಬಹಳ ಜ್ವಲಂತವಾದ ಸಮಸ್ಯೆ ಇದೆ. ಇದು ಬೆಳಗಾಂ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಿದ್ದು....

ಶ್ರೀ ವಾಟಾಳ್ ನಾಗರಾಜ್ :– ನಿಮ್ಮ ಸರಕಾರ ಇವೊತ್ತು, ನಿನ್ನೆಯಿಂದ ನೋಡಿದರೆ ಇಲ್ಲ ಎಂದು ಕಾಣಿಸುತ್ತಾ ಇತ್ತು. ಆದರೆ ಇವೊತ್ತು, ಇವರು ನಿಂತಿರುವುದು ನೋಡಿದರು, ಇದೆ ಎಂದು ಕಾಣಿಸುತ್ತಾ ಇದೆ. ಆದ್ದರಿಂದ ನೀವು ಇದ್ದೀರೋ ಎಂಬುದನ್ನು ನೋಡಿದಾಗ ಸರಕಾರ ಇದೆ ಎಂದು ಗೊತ್ತಾಯಿತು. ನೀವು ಇರಬೇಕು ಎಂದು ನಾನು ಬಯಸುತ್ತೇನೆ ಮತ್ತು ಸಂತೋಷಪಡುತ್ತೇನೆ. ನಿಮ್ಮ ಸರಕಾರ ಉಳಿಯಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

SRI HARNAHALLI RAMASWAMY:– My only request is don't be uncharitable. ತಾವುಗಳು ಏನು ಸಲಹೆ ಹೇಳಿದರೂ ಅದನ್ನು ಕೇಳುವುದಕ್ಕೆ ನಾವು ಸಿದ್ಧರಿದ್ದೇವೆ. ಇವುಗಳೆಲ್ಲಾ ನಮಗೂ, ನಿಮಗೂ ಸಮಾನವಾಗಿರತಕ್ಕಂಥ ಸಮಸ್ಯೆಗಳು. ಅದಕ್ಕೆ ನಾವುಗಳು ಸಮಾನವಾಗಿ ಪರಿಹಾರವನ್ನು ಕಂಡುಹಿಡಿಯಬೇಕು. ಇದು ಇಡೀ ಸಮಾಜಕ್ಕೆ ತಾಗಿದಂಥ ಕಳಂಕವಾಗಿದ್ದು ಎಲ್ಲರೂ ಸೇರಿ ಪರಿಹಾರ ಮಾಡುವತ್ತ ಚರ್ಚಿಸೋಣ.

ಶ್ರೀ ವಾಟಾಳ್ ನಾಗರಾಜ್:– ನಮ್ಮ ಸಂಸದೀಯ ಸಚಿವರ ಮೇಲೆ ನಮಗೆ ಅಪಾರ ಗೌರವವಿದೆ.

(ನಗು–ಗೊಂದಲ)

ಶ್ರೀ ಎಂ.ಎಸ್. ಪಾಟೀಲ್:– ಸಭಾಧ್ಯಕ್ಷಿಣಿಯವರೇ, ಇವರು ನಾವು ಇದ್ದಾಗ ನಮ್ಮನ್ನು ಹೊಗಳುತ್ತಾರೆ, ನೀವು ಇದ್ದಾಗ ನಿಮ್ಮನ್ನು ಹೊಗಳುತ್ತಾರೆ, ಬೇರೆಯವರು ಇದ್ದಾಗ ಅವರನ್ನು ಹೊಗಳುತ್ತಾರೆ. ಇವರನ್ನು ನಂಬುವುದು .....

ಶ್ರೀ ಆರ್.ವಿ. ದೇಶಪಾಂಡೆ:– ಬೆಳಗಾಂ ಮತ್ತು ಉತ್ತರಕನ್ನಡದಲ್ಲಿ ಕಬ್ಬು ಬೆಳೆಗಾರರ ಸಮಸ್ಯೆ ಇದೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಆಗಲೇ ಹೇಳಿದಂತೆ ಶ್ರೀಮತಿ ಕಾಮಾಕ್ಷಿಯವರು ಸರಕಾರಕ್ಕೆ ಕೊಟ್ಟ ಮನವಿಯನ್ನು ತಮ್ಮ ಮೂಲಕ ಸಲ್ಲಿಸುತ್ತೇನೆ.

**3) ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಕಬ್ಬು ಬೆಳೆಗಾರರ ಸಮಸ್ಯೆ**

ಶ್ರೀ ಆರ್.ವಿ. ದೇಶಪಾಂಡೆ:– ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಕಬ್ಬು ಬೆಳೆಗಾರರ ಸಮಸ್ಯೆಯು ಬಹಳ ದೊಡ್ಡದಾಗಿದೆ. ಇದು ಅಲ್ಲಿಯ ಶಾಸಕ ಮಿತ್ರರೆಲ್ಲರಿಗೂ ಗೊತ್ತಿದೆ. ಕಬ್ಬು ಹೆಚ್ಚಾಗಿ ಬೆಳೆದಿದ್ದರೂ ಕೂಡ ಅದನ್ನು ಬೇರೆ ರಾಜ್ಯಗಳಿಗೆ ಸಾಗಿಸಲು ಇಂದು ಕಷ್ಟವಾಗಿದೆ. ಕಳೆದ ವರ್ಷಗಳಲ್ಲಿ ನಮ್ಮಲ್ಲಿನ ಹೆಚ್ಚುವರಿ ಕಬ್ಬು ಬೇರೆ ರಾಜ್ಯಗಳು ಅಂದರೆ ಗೋವ ಮತ್ತು ಮಹಾರಾಷ್ಟ್ರಗಳಿಗೆ ಹೋಗುತ್ತಾ ಇತ್ತು. ಸರಕಾರದವರು ಅದರ ಮೇಲೆ ಸೇಲ್ಸ್‌ಟ್ಯಾಕ್ಸ್‌ನ್ನು ಕೂಡ ಹಾಕುತ್ತಿದ್ದರು. ಇದು

1993ರ ಮಾರ್ಚ್ ತಿಂಗಳ ತನಕ ಜಾರಿಯಲ್ಲಿತ್ತು. ಆದರೆ ಮೊನ್ನೆ ಪುನಃ ಹೇಳದೆ ಕೇಳದೆ, ಸರಕಾರ ಕೇವಲ ಗೋವಕ್ಕೆ ಹೋಗುವ ಕಬ್ಬಿಗೆ ಮಾತ್ರ ರಿಯಾಯಿತಿ ಕೊಟ್ಟಿದೆ. ಮಹಾರಾಷ್ಟ್ರಕ್ಕೆ ಹೋಗುವ ಕಬ್ಬಿನ ಮೇಲೆ ಈ ಒಂದು ರಿಯಾಯಿತಿಯನ್ನು ಕೊಟ್ಟಿಲ್ಲ. ಹಾಗಾಗಿ ರೈತರಿಂದ ಅಜಿಟೇಶನ್ ನಡೆಯುತ್ತಾ ಇದೆ ಮತ್ತು ಅವರು ಕಷ್ಟದಲ್ಲಿದ್ದಾರೆ. ಕಬ್ಬು ಮಹಾರಾಷ್ಟ್ರಕ್ಕೆ ಹೋಗುತ್ತಾ ಇಲ್ಲ. ನೀವು ಅವರಿಗೆ ಕೊಟ್ಟಿದ್ದ ಅಶ್ಯೂರೆನ್ಸ್ ಪ್ರಕಾರ ಆರ್ಡರ್ ಮಾಡಿದ್ದನ್ನು ಏತಕ್ಕಾಗಿ ಹಿಂದಕ್ಕೆ ತೆಗೆದುಕೊಂಡಿದ್ದೀರಿ ? ಈ ಪ್ರಕಾರ ಸೇಲ್ಸ್‌ಟ್ಯಾಕ್ಸ್ ವಿತ್‌ಡ್ರಾ ಆಗಬೇಕಾಗುತ್ತದೆ. ಮತ್ತೊಂದು ಸಮಸ್ಯೆ ಎಂದರೆ, ಮುಂಚೆ ಒಂದು ಟನ್ ಕಬ್ಬಿಗೆ 20 ರೂಪಾಯಿಗಳಂತೆ ತೆಗೆದುಕೊಳ್ಳುತ್ತಾ ಇದ್ದರು.

ಉಪಾಧ್ಯಕ್ಷಿಣಿಯವರು:– ದೇಶಪಾಂಡೆಯವರೇ, ತಾವುಗಳು ಈ ವಿಷಯ ಪ್ರಸ್ತಾಪಕ್ಕೆ ಮೊದಲು ಒಂದು ನೋಟೀಸನ್ನು ಕಳುಹಿಸಬೇಕಾಗಿತ್ತು, ಅಥವಾ ಒಂದು ಚರ್ಚೆ ಮಾಡುತ್ತೇನೆ ಎಂದು ಹೇಳಬೇಕಾಗಿತ್ತು. ಅದನ್ನು ಬಿಟ್ಟು ಸುಮ್ಮನೆ ಇಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದರೆ ಕಷ್ಟವಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:– ಮೊದಲು ಇದ್ದ ಟ್ಯಾಕ್ಸ್‌ಅನ್ನು ವಿತ್‌ಡ್ರಾ ಮಾಡಿ, ನೂರಕ್ಕೆ ಎಂಟುಕಾಲು ರೂ.ಗಳು ಎಂದು ಮಾಡಿ, ಇವೊತ್ತು 500 ರೂ.ಗಳ ರೇಟ್‌ನ್ನು ಕಬ್ಬಿಗೆ ಕೊಡುತ್ತಾ ಇದ್ದೀರಿ. ಅದರ ಮೇಲೆ 40–50ರೂ.ಗಳ ಟ್ಯಾಕ್ಸ್‌ನ್ನು ರೈತರು ಕೊಡಬೇಕಾಗುತ್ತದೆ. ಹಾಗಾಗಿ ಇವೊತ್ತು ರೈತರಿಗೆ ಕಷ್ಟವಾಗಿದೆ. ಶುಗರ್ ಫ್ಯಾಕ್ಟರಿಯವರಿಗೆ ರೈತರಿಗೆ ಯೋಗ್ಯ ಬೆಲೆಯನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ. ಮೊದಲು 20ರೂ.ಗಳ ಟ್ಯಾಕ್ಸ್ ತೆಗೆದುಕೊಂಡರೂ ಪುನಃ ಆ 20 ರೂಪಾಯಿಗಳಲ್ಲಿ ಅವರು 12 ರೂಪಾಯಿಗಳನ್ನು ವಾಪಸ್ ಕೊಡುತ್ತಾ ಇದ್ದರು. ಅದನ್ನು ಫ್ಯಾಕ್ಟರಿಯ ಅಭಿವೃದ್ಧಿ ಮತ್ತು ರೈತರ ಕಲ್ಯಾಣಕಾರ್ಯಗಳಿಗಾಗಿ ಬಿಡುತ್ತಿದ್ದರು. 8 ರೂ.ಗಳನ್ನು ಮಾತ್ರ ಸರಕಾರದವರು ತೆಗೆದುಕೊಳ್ಳುತ್ತಾ ಇದ್ದರು. ಆದರೆ ಈಗ ಪ್ರತಿ ಟನ್‌ಗೆ 50 ರೂ.ಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಇದರ ಬಗ್ಗೆ ಸರಕಾರದ ನೀತಿ ಏನು ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್:– ಕಳೆದ ಬಾರಿ ರಾಜ್ಯದ ಕಬ್ಬನ್ನು ಬೇರೆ ರಾಜ್ಯಗಳಿಗೆ ಕಳುಹಿಸುವ ನಿರ್ಧಾರವನ್ನು ಸರಕಾರದವರು ಮಾಡಿದ್ದರು. ಯಾವುದೇ ರೀತಿಯ ಟ್ಯಾಕ್ಸ್ ಇಲ್ಲದೆ ಕಳುಹಿಸಬಹುದೆಂದು ನಿರ್ಣಯಿಸಲಾಯಿತು. ಆದರೆ ಈ ಸಲ ಅದನ್ನು ಬದಲಾವಣೆ ಮಾಡಿದ್ದರಿಂದ ತೊಂದರೆ ಅನುಭವಿಸಬೇಕಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರ ಸರಕಾರ ಇರುವಾಗ ಮಾಡಿದ ಕೆಲಸ ಇದೆ. ಅದನ್ನು ನಾವು ಅನುಭವಿಸುತ್ತಾ ಇದ್ದೇವೆ. ದಯಮಾಡಿ ಅವರು ಕೋಪ ಮಾಡಿಕೊಳ್ಳಬಾರದು.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಇವತ್ತು ಬೆಳಗಾಂ ಜಿಲ್ಲೆಯಲ್ಲಿ ಶುಗರ್ ಕೇನ್ ಎಕ್ಸಸ್ ಇದೆ. ಎಕ್ಸಸ್ ಇದ್ದಿದ್ದು, ನೀರು ಕಡಿಮೆ ಇರುವ ಸಲುವಾಗಿ ಅದು ಒಣಗುತ್ತಾ ಇದೆ. ಈಗಾಗಲೇ ಜನವರಿ ತಿಂಗಳು ಪ್ರಾರಂಭವಾಯಿತು. ಜನವರಿ, ಫೆಬ್ರವರಿ, ಮಾರ್ಚ್ ಈ ಮೂರು ತಿಂಗಳೊಳಗೆ ಶುಗರ್ ಕೇನ್ ಕ್ರಷಿಂಗ್ ಮಾಡದೇ ಇದ್ದರೆ ಈಲ್ಡ್ ಕಡಿಮೆ ಆಗುತ್ತದೆ. ಅದನ್ನು ಮಹಾರಾಷ್ಟ್ರಕ್ಕೆ ಕಳುಹಿಸಿದರೆ ನಾವು 50ರೂಪಾಯಿ ಪರ್ ಟನ್‌ಗೆ ರೈತರಿಗೆ ಕೊಡಬೇಕಾಗುತ್ತದೆ. ಮಹಾರಾಷ್ಟ್ರದಲ್ಲಿ ಇವತ್ತಿನ ದಿವಸ ನಾವು ಮುನ್ನೂರು ನಾಲ್ಕುನೂರು ರೂಪಾಯಿಗೆ ಮಾರಲಿಕ್ಕೆ ಹತ್ತಿದ್ದೇವೆ. ಹೆಚ್ಚಿನ ರೇಟಿಗೆ ಮಾರಲಿಕ್ಕೆ ಹತ್ತಿಲ್ಲ. ಇದರಿಂದ ರೈತರಿಗೆ ಇಷ್ಟೊಂದು ಲುಕ್ಸಾನು ಆಗುತ್ತದೆ ? ಕಡೆಯ ಪಕ್ಷ ಏಪ್ರಿಲ್ ಒಳಗೆ ಎಕ್ಸಂಪ್ಷನ್ ಕೊಡದೇ ಹೋದರೆ ಪೂರ್ಣವಾಗಿ ರೈತ ಹಾಳಾಗುತ್ತಾನೆ. ಅದರ ಸಲುವಾಗಿ ಹೋದ ವರ್ಷ ಯಾವ ಪ್ರಕಾರವಾಗಿ ಪೂರ್ಣ ಎಕ್ಸಂಪ್ಷನ್ ಇತ್ತು ಅದೇ ಪ್ರಕಾರ ಈ ವರ್ಷವೂ ಸಹಿತ ಕೊಡಿ. ಬೆಳಗಾವಿ ಜಿಲ್ಲೆಯ ಕಬ್ಬನ್ನು ಎಲ್ಲಿ ಬೇಕಾದರೂ ಕಳುಹಿಸಿ. ಮಹಾರಾಷ್ಟ್ರಕ್ಕೆ ಕಳುಹಿಸಿ, ಕೇರಳಕ್ಕೆ

ಕಳುಹಿಸಿ, ಗೋವಾಕ್ಕೆ ಕಳುಹಿಸಿ, ನೀವು ಎಲ್ಲಿ ಬೇಕಾದರೂ ಕಳುಹಿಸುವಂತಹ ವ್ಯವಸ್ಥೆ ಮಾಡಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎ.ಬಿ. ಜಕನೂರು:– ಮಾನ್ಯ ವಿರೋಧ ಪಕ್ಷದ ನಾಯಕರು ಏನು ವಿಷಯ ಎತ್ತಿದ್ದಾರೆ. ಅದು ಬಹಳ ಗಂಭೀರವಾದಂತಹ ವಿಷಯವಾಗಿದೆ. ಏಕೆಂದರೆ ಬೆಳಗಾಂ ಜಿಲ್ಲೆಯಲ್ಲಿ ಕಬ್ಬಿನ ಉತ್ಪಾದನೆ ಹೆಚ್ಚಿದೆ. ಇಲ್ಲಿ ಇದ್ದಂತಹ ಫ್ಯಾಕ್ಟರಿಗಳಿಗೆ ಎಲ್ಲಾ ಕಬ್ಬನ್ನು ನುರಿಸುವ ಶಕ್ತಿ ಇಲ್ಲ. ಆದ್ದರಿಂದ ಹೋದ ವರ್ಷ ಆಗಿನ ಮುಖ್ಯಮಂತ್ರಿಗಳೇ, ಅರ್ಥಮಂತ್ರಿಗಳು ಆಗಿದ್ದರು. ಅವರು On the floor of the House, he promised and announced that no Purchase Tax shall be levied on the Sugarcane which is transported to other States for crushing for one year i.e., until 31–3–1992. Now, I do not know who has done it. On 20–11–1992, they have withdrawn that exemption to the extent of Maharashtra and got it for Goa. One thing is that discrimination has been committed. Second thing is that without bringing to the notice of the House, it cannot be withdrawn as per law. It amounts to breach of privilege.

ಶ್ರೀ ಹಾರನಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷಣಿಯವರೇ, ಶೂನ್ಯ ವೇಳೆಯಲ್ಲಿ ಇಂತಹ ವಿಷಯಗಳನ್ನು ಎತ್ತಿದರೆ ಉತ್ತರ ಹೇಳೋದು ಕಷ್ಟ ಆಗುತ್ತದೆ. ಏಕೆಂದರೆ ಕೆಲವು ಅಂಕಿ ಅಂಶಗಳು ಇರುವುದಿಲ್ಲ. ಹಿನ್ನೆಲೆ ಗೊತ್ತಿರುವುದಿಲ್ಲ, ನನಗಂತೂ ವಿಷಯ ಗೊತ್ತಿಲ್ಲ. ಆದ್ದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಹೇಳುವುದೇನೆಂದರೆ, ತಾವು ಒಂದು ಗಮನ ಸೆಳೆಯುವ ಸೂಚನೆ ಕೊಟ್ಟರೆ .....

ಶ್ರೀ ಆರ್.ವಿ. ದೇಶಪಾಂಡೆ:– ಗಮನ ಸೆಳೆಯುವ ಸೂಚನೆ ಕೊಟ್ಟು ಆಗಲೇ ಮೂರು ದಿನವಾಯಿತು, ಇನ್ನೂ ಬಂದಿಲ್ಲ.

(ಗೊಂದಲ)

ಶ್ರೀ ಹಾರನಳ್ಳಿ ರಾಮಸ್ವಾಮಿ:– ತಾವು ಗಮನ ಸೆಳೆಯುವ ಸೂಚನೆ ಆಗಲೇ ಕಳುಹಿಸಿದ್ದರೆ, ನಾಳೆ ಅಥವಾ ನಾಡಿದ್ದು ತೆಗೆದುಕೊಳ್ಳೋಣ.

(ಗೊಂದಲ)

ಉಪಾಧ್ಯಕ್ಷಣಿಯವರು:– ಈಗ ಚರ್ಚೆಯನ್ನು ಪ್ರಾರಂಭ ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ:– ನಾನು ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದೇನೆ ....

(ಗೊಂದಲ)

ಶ್ರೀ ಹಾರನಳ್ಳಿ ರಾಮಸ್ವಾಮಿ:– ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ, ತಾವು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇವೆ ಎಂದು. ಹೌದಾ ? ಮುಖ್ಯಮಂತ್ರಿಗಳ ಜೊತೆ ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಜಕನೂರ್‌ರವರು ಶ್ರೀಮಾನ್ ಮಲ್ಲಾರಿ ಗೌಡರು ಹೇಳುತ್ತಿದ್ದಾರೆ, ಮುಖ್ಯಮಂತ್ರಿಗಳಿಗೆ ಇದನ್ನು ತಿಳಿಸಿ, ಅವರ ಹತ್ತಿರ ಉತ್ತರ ಸಿದ್ಧವಾಗಿದ್ದರೆ, ಇವತ್ತು ಸಂಜೆ ಒಳಗೆ ಕೊಡಲಿಕ್ಕೆ ನಾನು ತಿಳಿಸುತ್ತೇನೆ.

ಉಪಾಧ್ಯಕ್ಷಣಿಯವರು:– ಈಗ ಚರ್ಚೆ ಪ್ರಾರಂಭ, ಶ್ರೀಮಾನ್ ಬೈರೇಗೌಡರು ಒಂದೈದು ನಿಮಿಷ ಮಾತನಾಡುತ್ತಾರೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ಪರವಾಗಿ ಶ್ರೀ ವೈ.ಕೆ. ರಾಮಯ್ಯನವರು ಮಾತನಾಡುತ್ತಾರೆ. ಅವರು ಮೊದಲು ಮಾತನಾಡಲಿ, ನಂತರ ನಾನು ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ರಾಮನ ಬಗ್ಗೆ ಮಾತನಾಡುವುದಕ್ಕೆ ಅವರು ಹೆದರುತ್ತಾರೆ.

ಶ್ರೀ ಸಿ. ಬೈರೇಗೌಡ:– ನಾನು ರಾಮನಿಗೂ ಹೆದರುವುದಿಲ್ಲ, ಭೀಮನಿಗೂ ಹೆದರುವುದಿಲ್ಲ, ವಾಟಾಳ್ ನಾಗರಾಜು ಅವರಿಗೂ ಹೆದರುವುದಿಲ್ಲ.

ಉಪಾಧ್ಯಕ್ಷರು:– ಅಯೋಧ್ಯೆ ಘಟನೆ ಬಗ್ಗೆ ನಿನ್ನೆ ಅಪೂರ್ಣಗೊಂಡಿದ್ದ ಚರ್ಚೆ ಈಗ ಮುಂದುವರಿಯುವುದು. ಶ್ರೀ ವೈ.ಕೆ. ರಾಮಯ್ಯನವರು ಈಗ ತಮ್ಮ ಚರ್ಚೆ ಪ್ರಾರಂಭ ಮಾಡಬಹುದು.

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):– ಮಾನ್ಯ ಉಪಾಧ್ಯಕ್ಷರೇ, ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ನಡೆದ ಮಸೀದಿ ಕೆಡವಿದ ಒಂದು ಘಟನೆ ಬಗ್ಗೆ ಈ ರಾಷ್ಟ್ರದ ಎಲ್ಲಾ ಮಾಧ್ಯಮಗಳು ಹಾಗೂ ಎಲ್ಲಾ ವೇದಿಕೆಗಳಲ್ಲಿ ಚರ್ಚೆಯಾಗಿದೆ. ಚರ್ಚೆಯಾಗುತ್ತಿದೆ. ಅದಕ್ಕೆ ಮೂಲ ಒಂದು ವಾದದ ಪ್ರಕಾರ, ಒಂದು ವರ್ಗದವರ ನಂಬಿಕೆ ಪ್ರಕಾರ ಕೆಡವಿದ ಮಸೀದಿ ಇರುವ ಜಾಗದಲ್ಲಿ ಒಂದು ಕಾಲದಲ್ಲಿ ಶ್ರೀರಾಮ ಹುಟ್ಟಿದ್ದ. ಅಲ್ಲಿ ಶ್ರೀರಾಮನ ದೇವಸ್ಥಾನ ಇತ್ತು. ಅದನ್ನು ಇತ್ತೀಚಿನ ವರ್ಷಗಳಲ್ಲಿ ಬಾಬರ್ ಬಂದ ಕಾಲದಲ್ಲಿ ದೇವಸ್ಥಾನವನ್ನು ಕೆಡವಿ ಮಸೀದಿಯನ್ನು ಕಟ್ಟಿದರು, ಆದುದರಿಂದ, ಆ ಮಸೀದಿಯನ್ನು ಕೆಡವಿ ಶ್ರೀರಾಮನ ದೇವಸ್ಥಾನವನ್ನು ಕಟ್ಟುತ್ತಿದ್ದೇವೆನ್ನುವ ವಾದ ನಮ್ಮ ಮುಂದೆ ಇದೆ. ಸನ್ಮಾನ್ಯ ಅಧ್ಯಕ್ಷರೇ, ಯಾವುದೇ ಒಬ್ಬ ವ್ಯಕ್ತಿ, ಯಾವುದೇ ಒಂದು ಸಂಸ್ಥೆ ಅಥವಾ ಯಾವುದೇ ಒಂದು ಪಕ್ಷ ಈ ರಾಷ್ಟ್ರ ಒಂದು ಜಾತಿ ಜನರಿಗೆ ಸೇರಿದ್ದುದು, ಒಂದು ಮತದ ಜನರಿಗೆ ಸೇರಿದ್ದುದು, ಒಂದು ವರ್ಗದ ಜನರಿಗೆ ಸೇರಿದ್ದುದು ಎನ್ನುವಂತಹ ವಾದ ಏನಾದರೂ ಇದ್ದರೆ ಆ ವಾದ ನನ್ನ ಪ್ರಕಾರ ಖಂಡನಾರ್ಹವಾದುದು. ಕಾರಣ, ಈ ರಾಷ್ಟ್ರದಲ್ಲಿ ಎಲ್ಲರೂ ಬದುಕಬೇಕು. ಬದುಕುವುದು ಅಷ್ಟೇ ಅಲ್ಲ ಎಲ್ಲರೂ ತಮ್ಮ ನಂಬಿಕೆ ಇಟ್ಟುಕೊಳ್ಳಬೇಕು ಎನ್ನುವ ಸ್ವಾತಂತ್ರ್ಯವನ್ನು 1956ರಿಂದಲೂ ಈ ರಾಷ್ಟ್ರದ ಸಂವಿಧಾನದಲ್ಲಿ ಅಳವಡಿಸಿಕೊಂಡು, ನಾವು ಅದನ್ನು ಪರಿಪಾಲನೆ ಮಾಡುತ್ತಾ ಬಂದಿದ್ದೇವೆ. ಕೇವಲ ಬದುಕುವುದಕ್ಕಷ್ಟೇ ಸ್ವಾತಂತ್ರ್ಯ ಅಲ್ಲ, ಬದುಕುತ್ತಿರುವ ಈ ಜನರಿಗೆ ಈ ರಾಷ್ಟ್ರದಲ್ಲಿ ತನ್ನದೇ ಆಗಿರತಕ್ಕ ನಂಬಿಕೆಯನ್ನು ಇಟ್ಟುಕೊಳ್ಳುವ ಸ್ವಾತಂತ್ರ್ಯ ಇದೆ. ಇಂತಹ ಸ್ವಾತಂತ್ರ್ಯವನ್ನು ಹೊಂದಿರುವ ಜಾತ್ಯಾತೀತತೆಯ ಸಂವಿಧಾನದಲ್ಲಿ ಈ ರಾಷ್ಟ್ರ ಹಿಂದೂಗಳಿಗೆ ಸೇರಿದ್ದು, ಈ ರಾಷ್ಟ್ರ ಜೈನರಿಗೆ ಸೇರಿದ್ದು, ಈ ರಾಷ್ಟ್ರ ಅಲ್ಪಸಂಖ್ಯಾತರಿಗೆ ಸೇರಿದುದು ಎನ್ನುವ ವಾದ ಖಂಡನಾರ್ಹವಾದುದು. ಈ ಹಿನ್ನೆಲೆಯಲ್ಲಿ 6ನೇ ತಾರೀಖು ನಡೆದ ಘಟನೆಯನ್ನು ಯಾವುದೇ ದೃಷ್ಟಿಯಿಂದ ಸಮರ್ಥಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮತದ ಅಮಲು ಏರಿದ ಜನ, ಮತೀಯ ಭಾವನೆಯ ಪಿತ್ತ ಏರಿದ ಜನ ಹುಚ್ಚೆದ್ದು ಕುಣಿದಾಗ ಅದನ್ನು ನಿಯಂತ್ರಣ ಮಾಡತಕ್ಕ ವಿಶೇಷ ಅವಶ್ಯಕತೆ ಇದೆ ಎನ್ನುವುದನ್ನು ನಾವು ಚಿಂತನೆ

1.40 ಪಿ.ಎಂ

ಮಾಡಬೇಕಾಗಿದೆ. ಬಾಬರಿ ಮಸೀದಿಯನ್ನು ಕೆಡವಿದಂಥವರು ಯಾರೇ ಇರಬಹುದು. ಶಿವಸೇನೆಯವರು ಕೆಡವಿದ್ದಾರೋ, ಆರ್.ಎಸ್.ಎಸ್.ನವರು ಕೆಡವಿದ್ದಾರೋ, ವಿಶ್ವ ಹಿಂದೂ ಪರಿಷತ್ತಿನವರು ಕೆಡವಿದ್ದಾರೋ ಗೊತ್ತಿಲ್ಲ. ನಾವಂತೂ ಕಣ್ಣಾರೆ ನೋಡಿಲ್ಲ. ಆದರೆ ಅವರಿಗೆ ನನ್ನ ನೇರವಾದ ಪ್ರಶ್ನೆ ಇಷ್ಟೇ. ಕಾನೂನಿನ ದೃಷ್ಟಿಯಿಂದ ಇದು ಸರಿಯಾದುದೇ ? ರಾಷ್ಟ್ರದಲ್ಲಿರುವಂಥ ಎಲ್ಲಾ ವಿವಾದಗಳನ್ನು ಈ ರೀತಿ ಬಗೆಹರಿಸುವುದಕ್ಕೆ ಸಾಧ್ಯವೇ ? ಇದು ಬಹಳ ಪ್ರಮುಖವಾದಂಥ ಪ್ರಶ್ನೆ ? ಇವತ್ತು ಬಾಬರಿ ಮಸೀದಿ ಅಲ್ಲಿ ಇತ್ತು. ಆ ಸ್ಥಳದಲ್ಲಿ ಹಿಂದೆ ಶ್ರೀರಾಮ ದೇವಸ್ಥಾನ ಇತ್ತೆ,